ಪಿ. ಡಬ್ಲ್ಯೂ: 1

(ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾ: 12/12/2023 )

ಪಾಟೀ ಸವಾಲು : 62 ಎ ಪ್ರತಿವಾದಿ ಪರ ಶ್ರೀ ಎನ್ ಎಮ್ ಎನ್ ವಕೀಲರಿಂದ,

ನನಗೆ ಕನ್ನಡ ಓದಲು ಬರೆಯಲು ಸ್ವಲ್ಪ ಬರುತ್ತದೆ. ನಾನು 2 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ಈ ದಾವೆಯನ್ನು ನನ್ನ ತಂದೆ ದಾಖಲಿಸಿರುತ್ತಾರೆ. ಈ ದಾವೆಯಲ್ಲಿ ಹಾಜರುಪಡಿಸಿದ ದಾಖಲೆಯನ್ನು ನಾನು ತಂದು ನೀಡಿರುತ್ತೇನೆ. ದಾವೆಗೆ ನಾನೇ ಮಾಹಿತಿ ನೀಡಿರುತ್ತೇನೆ. ದಾವಾ ಆಸ್ತಿಯ ಪಕ್ಕದಲ್ಲಿ ಹವ್ಯಕ ಸಭಾಭವನ ಇದೆ ಎಂದರೆ ಸರಿ. ಸದ್ರಿ ಹವ್ಯಕ ಸಭಾಭವನ ನಿರ್ಮಾಣ ಆದ ಬಗ್ಗೆ ಗೊತ್ತು. ಸದ್ರಿ ಸಭಾಭಾವನ 20 ವರ್ಷಗಳ ಹಿಂದೆ ನಿರ್ಮಾಣವಾಗಿರುತ್ತದೆ. ಆ ಸಮಯದಲ್ಲಿ ದಾವಾ ಆಸ್ತಿ ಮಾರಾಟ ಆಗಿತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಆ ಸಮಯದಲ್ಲಿ ಮಾರಾಟವಾಗಿರುವ ವಿಚಾರ ಗೊತ್ತಿರಲಿಲ್ಲ, ನಂತರ ಗೊತ್ತಾಗಿದ್ದು, ಆಮೇಲೆ ಈ ದಾವೆ ದಾಖಲಿಸಿರುತ್ತೇವೆಂದು ನುಡಿದಿರುತ್ತಾರೆ.

2. 1992 ರಲ್ಲಿ ಆದ ತೊಂಡಿ ವಾಂಟಣಿಯ ಪಕ್ಷಗಾರಾದ ಮಂಜುನಾಥ ಈರಪ್ಪ ನಾಯ್ಕ ಮತ್ತು ಗಜಾನನ ಈರಪ್ಪ ನಾಯ್ಕರವರು ಒಂದೇ ಕುಟುಂಬದವರು ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಸದ್ರಿಯವರು ನಮ್ಮ ಗ್ರಾಮದವರೂ ಅಲ್ಲ ಹಾಗೆ ನಮ್ಮ ಕಟುಂಬದವರೂ ಅಲ್ಲವೆಂದು ನುಡಿದಿರುತ್ತಾರೆ. ನಾನು ಹೇಳುವಂತೆ ಸದ್ರಿಯವರು ನಮ್ಮ ಕಟುಂಬದವರು ಅಲ್ಲದೇ ಇದ್ದರೂ ತೊಂಡಿ ವಾಂಟಣಿ ಮಾಡಿಕೊಂಡಿದ್ದಾರೆಂದು ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿರುವುದಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹ ಒಳಸಂಚಿನಿಂದ ಈ ಸುಳ್ಳು ದಾವೆಯನ್ನು ದಾಖಲಿಸಿರುತ್ತೇನೆಂದರೆ ಸರಿಯಲ್ಲ. ದಾವಾ ಆಸ್ತಿಯನ್ನು 62 ಎ ಪ್ರತಿವಾದಿಯವರು ಸದ್ಭಾವನೆಯಿಂದ ಖರೀದಿ ಮಾಡಿದ್ದು ಈ ದಾವೆ ಅವರಿಗೆ ಬಾಧಕವಾಗುವುದಿಲ್ಲವೆಂದರೆ ಸಾಕ್ಷಿಯು ಸದ್ರಿಯವರು ಖರೀದಿ ಮಾಡಿರುವುದು ಗೊತ್ತಿರಲಿಲ್ಲವೆಂದು ನುಡಿದಿರುತ್ತಾರೆ. ಇದು ಸುಳ್ಳು ವಿಚಾರದಿಂದ ಕೂಡಿದ ದಾವೆಯಾಗಿದ್ದು ಅದಕ್ಕೆ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಈ ಹಂತದಲ್ಲಿ 41ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲನ್ನು ಮದ್ಯಾಹ್ನ ಮಾಡಿತ್ತೇನೆಂದು ಹೇಳಿದ ಕಾರಣ ಪಾಟೀ ಸವಾಲನ್ನು ಮದ್ಯಾಹ್ನಕ್ಕೆ ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**sd/-**

**ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.**

**(ಇಂದು ತಾಃ 12/12/2023 ರಂದು ವಿರಾಮದ ನಂತರ ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)**

**ಪಾಟೀ ಸವಾಲು : 41 ನೇ ಪ್ರತಿವಾದಿ ಪರ ಶ್ರೀ ಎಮ್.ಎಲ್.ಎನ್. ವಕೀಲರ ಪರವಾಗಿ ಶ್ರೀ ಜಿ.ಎನ್.ಎನ್. ವಕೀಲರಿಂದ,**

21 ನೇ ಪ್ರತಿವಾದಿಯವರು ನನ್ನ ತಂದೆಯ ತಂಗಿ, ನನಗೆ ಅತ್ತೆ ಆಗಬೇಕು. ಭೂನ್ಯಾಯ ಮಂಡಳಿಯಿಂದ ದಾವಾ ಆಸ್ತಿ ಮಂಜೂರಿಯಾದ ನಂತರ ವಾದಿಯಾದ ನಾವು, ಪ್ರತಿವಾದಿ ಸಂಖ್ಯೆ: 1 ರಿಂದ 21, 26 ರಿಂದ 39ರವರು ತಮ್ಮ ಕಬ್ಜಾ ವಹಿವಾಟುಗಳನ್ನು ಮುಂದುವರೆಸಿಕೊಂಡು ಬಂದೆವೆಂದರೆ ಸರಿ. 2007 ನೇ ಇಸವಿಯಲ್ಲಿ ಪ್ರತಿವಾದಿ ಸಂಖ್ಯೆ: 21 ರಿಂದ 23ರವರು ಪ್ರತಿವಾದಿ ಸಂಖ್ಯೆ: 41ರವರಿಗೆ ದಾವಾ ಆಸ್ತಿಯಲ್ಲಿರುವ ಸರ್ವೆ ನಂಬರ್ 647ಡ ಪೈಕಿ 2 ಗುಂಟೆ 4 ಆಣೆ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಹಾಗೆ ಸದ್ರಿ ಮಾರಾಟವನ್ನು ಪರಾಧೀನ ಅವಧಿ ಮುಗಿದ ನಂತರ ಮಾರಾಟ ಮಾಡಿರುತ್ತಾರೆಂದರೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲು ಮಾಡಲು ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ. ಹೇ.ಕೇ. ಸರಿ ಇದೆ**

**sd/-**

**ಪ್ರಧಾನ ಸಿವಿಲ್ ಜಡ್ಜ್, ಭಟ್ಕಳ.**